# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1667

2) ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವ

3) ಉತ್ತರಿಸಬೇಕಾದ ದಿನಾಂಕ : 18-03-2026

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮೀನುಗಾರಿಕೆ ಉದ್ಯಮ ಬಲಪಡಿಸಿ ಮೀನುಗಾರರನ್ನು ಸ್ವಾವಲಂಬಿಗಳಾಗಿ ಮಾಡುವ ದೃಷ್ಟಿಯಿಂದ ಪ್ರತ್ಯೇಕ ಮೀನುಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಬೇಕಾದ ಅನಿವಾರ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಈಗಾಗಲೇ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಮೀನುಗಾರಿಕೆ ಉದ್ಯಮ ಬಲಪಡಿಸಿ ಮೀನುಗಾರರನ್ನು ಸ್ವಾವಲಂಬಿಗಳಾಗಿ ಮಾಡುವ ದೃಷ್ಟಿಯಿಂದ ಮೀನುಗಾರಿಕೆ ವಿಶ್ವವಿದ್ಯಾಲಯ ವನ್ನು ಸ್ಥಾಪನೆ ಮಾಡಬೇಕಾದ ಅನಿವಾರ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯ ಮೀನುಗಾರರ ಹಿತರಕ್ಷಣೆಗೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮ ಗಳೇನು; ಹಾಗೂ ಮೀನುಗಾರರಿಗೆ ಸರ್ಕಾರ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳು ಯಾವುವು; | ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯ ಮೀನುಗಾರರ ಹಿತರಕ್ಷಣೆಗೆ ಸರ್ಕಾರ ರೂಪಿಸಿರುವ ಯೋಜನೆ, ಕಾರ್ಯಕ್ರಮ ಹಾಗೂ ಮೀನುಗಾರರಿಗೆ ಸರ್ಕಾರ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯ ಮೀನುಗಾರರಿಗೆ ಸಂಬಂಧಿಸಿದ ಯೋಜನೆ ಮತ್ತು ಸೌಲಭ್ಯಗಳಿಗೆ ಸರ್ಕಾರ ವಿನಿಯೋಗಿಸಿರುವ ಅನುದಾನದ ವಿವರಗಳೇನು; | ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯ ಮೀನುಗಾರರಿಗೆ ಸಂಬಂಧಿಸಿದ ಯೋಜನೆ ಮತ್ತು ಸೌಲಭ್ಯಗಳಿಗೆ ಸರ್ಕಾರ ವಿನಿಯೋಗಿಸಿರುವ ಅನುದಾನದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಈ) | ಮೀನುಗಾರಿಕೆ ಉದ್ಯಮ ವಿಸ್ತರಿಸಲು ಹಾಲಿ ಪಶುಸಂಗೋಪನೆ ವಿಶ್ವವಿದ್ಯಾಲಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಮೀನುಗಾರಿಕೆ ಯನ್ನು ಪ್ರತ್ಯೇಕಗೊಳಿಸಿ ಹೊಸ ವಿಶ್ವವಿದ್ಯಾಲಯವನ್ನು ಯಾವ ಕಾಲಮಿತಿ ಯೊಳಗೆ ಸ್ಥಾಪನೆ ಮಾಡಲಾಗುವುದು? | ಮೀನುಗಾರಿಕೆ ಉದ್ಯಮ ವಿಸ್ತರಿಸಲು ಹಾಲಿ ಪಶುಸಂಗೋಪನೆ ವಿಶ್ವವಿದ್ಯಾಲಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಮೀನುಗಾರಿಕೆಯನ್ನು ಪ್ರತ್ಯೇಕಗೊಳಿಸಿ ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಪಸಂಮೀ ಇ-73 ಮೀಇಯೋ 2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1667 ರ

## ಅನುಬಂಧ-01

### ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯ ಮೀನುಗಾರರ ಹಿತರಕ್ಷಣೆಗೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳು ಹಾಗೂ ಮೀನುಗಾರರಿಗೆ ಸರ್ಕಾರ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳು

| ಕ್ರ. ಸಂ. | ಯೋಜನೆಗಳು ಮತ್ತು ಸೌಲಭ್ಯಗಳ ವಿವರಗಳು |
|---|---|
| **ಅ** | **ಕೇಂದ್ರ ಪುರಸ್ಕೃತ -ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ** |
| 1 | ಸಾಂಪ್ರದಾಯಿಕ ಮೀನುಗಾರರಿಗೆ Deep sea fishing vessels ಗಳನ್ನು ನಿರ್ಮಾಣ ಮಾಡಲು ಸಹಾಯಧನ ನೀಡಲಾಗುತ್ತಿದೆ. |
| 2 | ಸಮುದ್ರಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ತೀರಗಳಲ್ಲಿ ಕೃತಕ ಬಂಡೆಗಳನ್ನು ಅಳವಡಿಸಲಾಗುತ್ತಿದೆ. |
| 3 | ಎಲ್ಲಾ ಯಾಂತ್ರೀಕೃತ ಮತ್ತು ಮೋಟಾರೀಕೃತ ದೋಣಿಗಳಿಗೆ ಉಚಿತವಾಗಿ Transponder ಅಳವಡಿಸಲಾಗುತ್ತಿದ್ದು, ಮೀನುಗಾರರ ಸುರಕ್ಷತೆಗಾಗಿ ದ್ವಿಮುಖ ಸಂವಹನ ಸಾಧನ, ಹವಮಾನ ವೈಪರಿತ್ಯ ಮಾಹಿತಿ ಮತ್ತು PFZ (Potential Fishing Zone) ಮಾಹಿತಿಗಳನ್ನು ಮೊಬೈಲ್ ಆಪ್ ಮೂಲಕ ನೀಡಲಾಗುತ್ತಿದೆ. |
| 4 | ಸಮುದ್ರದಲ್ಲಿ ಸುರಕ್ಷತೆಗಾಗಿ QR ಕೋಡ್ ಆಧಾರಿತ ಆದಾರ್ ಕಾರ್ಡ್ ನೀಡಲಾಗುತ್ತಿದೆ. |
| 5 | ಕೇಂದ್ರ ಸರ್ಕಾರದ NFDP (National fisheries Development Portal) ಅಡಿಯಲ್ಲಿ ಮೀನುಗಾರರಿಗೆ ಮೀನುಗಾರಿಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿರುವವರಿಗೆ ಮೀನುಗಾರಿಕೆ ನೋಂದಣಿ ಪತ್ರ ನೀಡಲಾಗುತ್ತಿದೆ. |
| 6 | Biofloc ಘಟಕ ಸ್ಥಾಪನೆಗೆ ಸಹಾಯಧನ ನೀಡಲಾಗುತ್ತಿದೆ |
| 7 | ಅಳಿವೆ ಪ್ರದೇಶದಲ್ಲಿ ಪಂಜರ ಮೀನು ಕೃಷಿಗೆ ಸಹಾಯಧನ ನೀಡಲಾಗುತ್ತಿದೆ. |
| 8 | ಅಳಿವೆಯಲ್ಲಿ ವಿವಿಧ ತಳಿಗಳ ಮೀನುಮರಿಗಳನ್ನು ದಾಸ್ತಾನು ಮಾಡಲಾಗುತ್ತಿದೆ |
| 9 | ಹಳೆಯ ಸಾಂಪ್ರದಾಯಿಕ ದೋಣಿಗಳ ಬದಲಿಗೆ ಸಾಂಪ್ರದಾಯಿಕ ಎಫ್.ಆರ್.ಪಿ.ದೋಣಿ ಖರೀದಿಗೆ ಸಹಾಯ |
| 11 | ಸುರಕ್ಷತೆ ಕಿಟ್‌ಗಳ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ. |
| 12 | ಮೀನು ಮಾರಾಟ ಮಳಿಗೆಯ ರಚನೆಗೆ ಸಹಾಯಧನ ನೀಡಲಾಗುತ್ತಿದೆ. |
| 13 | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು- ಐಸ್‌ಬಾಕ್ಸ್‌ನೊಂದಿಗೆ ದ್ವಿ-ಚಕ್ರ ವಾಹನ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ. |
| 14 | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು- ತ್ರಿಚಕ್ರ ವಾಹನ ಖರೀದಿಗೆ ಸಹಾಯ. |
| 15 | ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ಮೀನುಗಾರಿಕೆ ನಿಷೇಧದ ಅವಧಿಯಲ್ಲಿ ಮೀನುಗಾರರಿಗೆ ಪರಿಹಾರ ಧನವನ್ನು ನೀಡಲಾಗುತ್ತಿದೆ. |
| 16 | ಶೈತ್ಯಾಗಾರ /ಮಂಜುಗಡ್ಡೆ ಸ್ಥಾವರಗಳ ನಿರ್ಮಾಣಕ್ಕೆ ಸಹಾಯದನ ನೀಡಲಾಗುತ್ತಿದೆ. |
| 17 | ಶೈತ್ಯಾಗಾರ/ಮಂಜುಗಡ್ಡೆ ಸ್ಥಾವರಗಳ ಪುನರ್ ನಿರ್ಮಾಣಕ್ಕೆ ಸಹಾಯದನ ನೀಡಲಾಗುತ್ತಿದೆ. |
| 18 | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು- ಶಾಖನಿರೋಧಕ ವಾಹನಗಳ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ. |
| 19 | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು- ಶೀತಲೀಕೃತ ವಾಹನಗಳ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ. |
| 20 | ಬೈವ್ಯಾಲ್ವ್ ಕಲ್ಚರ್ (Bivalves culture) ಗೆ ಸಹಾಯಧನ ನೀಡಲಾಗುತ್ತಿದೆ. |
| **ಆ** | **ರಾಜ್ಯ ವಲಯ ಯೋಜನೆಗಳು** |
| 1 | **ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ** |

| | |
|---|---|
| a | ಸೀಗಡಿ ಮತ್ತು ಹಿನ್ನೀರು ಮೀನುಕೃಷಿಗೆ ಸಹಾಯಧನ ವಿತರಣೆ |
| b | ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ |
| c | ಮಂಜುಗಡ್ಡೆ ಸ್ಥಾವರ ಬಳಸಿದ ವಿದ್ಯುತ್ ಮೇಲಿನ ಸಹಾಯಧನ |
| d | ವಾಣಿಜ್ಯ ಬ್ಯಾಂಕ್ ಗಳಿಗೆ ಬಡ್ಡಿ ವ್ಯತ್ಯಾಸ ಮರುಪಾವತಿ ಯೋಜನೆ |
| e | ರಾಜ್ಯ ವಲಯ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಮೀನು ಮಾರಾಟಗಾರರಿಗೆ ನಾಲ್ಕು ಚಕ್ರದ ವಾಹನ ಖರೀದಿಗೆ ಸಹಾಯಧನ |
| 2 | ಮೀನುಗಾರಿಕಾ ಯಾಂತ್ರೀಕೃತ ದೋಣಿಗಳು ಬಳಸುವ ಡೀಸಿಲ್ ಮೇಲಿನ ರಾಜ್ಯ ಮಾರಾಟ ತೆರಿಗೆ ಸಹಾಯಧನವನ್ನು ನೀಡಲಾಗುವುದು |
| 3 | ಸಾಂಪ್ರದಾಯಿಕ ದೋಣಿಗಳಿಗೆ ರಿಯಾಯಿತಿ ದರದಲ್ಲಿ ಕೈಗಾರಿಕಾ ಸೀಮೆಎಣ್ಣೆ ವಿತರಣೆ |
| 4 | ಮೋಟಾರೀಕೃತ ಮೀನುಗಾರಿಕೆ ದೋಣಿಗಳಿಗೆ outboard ಇಂಜಿನ್ ಖರೀದಿಗೆ ಸಹಾಯಧನ |
| 5 | ಮೀನುಗಾರಿಕೆಯಲ್ಲಿ ತೊಡಗಿರುವಾಗ ಮೀನುಗಾರರು ಮರಣ ಹೊಂದಿದ ಪ್ರಕರಣಗಳಿಗೆ, ಬಲೆ/ದೋಣಿ ಹಾನಿ ಪ್ರಕರಣಗಳಿಗೆ, ಅಂಗ ವಿಕಲತೆ ಪ್ರಕರಣಗಳಿಗೆ ಹಾಗೂ ವೈದ್ಯಕೀಯ ವೆಚ್ಚ ಪ್ರಕರಣಗಳಿಗೆ ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಪರಿಹಾರ ನೀಡಲಾಗುತ್ತಿದೆ. |
| 6 | ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿ ಮರಣ ಪ್ರಕರಣಗಳಿಗೆ ಹಾಗೂ ಅಂಗ ವೈಕಲ್ಯತೆ ಪ್ರಕರಣಗಳಿಗೆ ವಿಮಾ ಸೌಲಭ್ಯ ನೀಡಲಾಗುತ್ತಿದೆ |
| 7 | ಉನ್ನತ ಶಿಕ್ಷಣ ಪಡೆಯುತ್ತಿರುವ ಮೀನುಗಾರರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಮೀನುಗಾರರ ವಿದ್ಯಾನಿಧಿ ಯೋಜನೆಯಡಿ ನೀಡಲಾಗುತ್ತಿದೆ |
| **ಇ** | **ಜಿಲ್ಲಾ ವಲಯ ಕಾರ್ಯಕ್ರಮಗಳು** |
| 1 | ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ- ಮೀನುಗಾರಿಕೆ ಕಿಟ್ ವಿತರಣೆ (ಪರಿಶಿಷ್ಟಜಾತಿ ಮೀನುಗಾರರಿಗೆ) |
| 2 | ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ ಯೋಜನೆಯಡಿ ಮೂರು ಚಕ್ರ ಹಾಗೂ ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯಧನ ನೀಡಲಾಗುತ್ತಿದೆ. |

**ಮೀನುಗಾರಿಕೆ ನಿರ್ದೇಶಕರು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1667ರ

# ಅನುಬಂಧ-2

**(ರೂ.ಲಕ್ಷಗಳಲ್ಲಿ)**

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ವರ್ಷ (ಮೀಸಲಿಡಲಾದ ಅನುದಾನ) | | |
|---|---|---|---|---|
| | | 2023-24 | 2024-25 | 2025-26 |
| **1** | **ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ** | | | |
| 1 | ಸಾಂಪ್ರದಾಯಿಕ ಮೀನುಗಾರರಿಗೆ ಆಳ ಸಮುದ್ರದ ಮೀನುಗಾರಿಕೆಯ ಅಭಿವೃದ್ಧಿಗಾಗಿ ಸಹಾಯ | 880.80 | 506.40 | 0520.7988 |
| 2 | ಹಳೆಯ ಸಾಂಪ್ರದಾಯಿಕ ದೋಣಿಗಳ ಬದಲಿಗೆ ಸಾಂಪ್ರದಾಯಿಕ ಎಫ್.ಆರ್.ಪಿ.ದೋಣಿ ಖರೀದಿ. | 89.00538 | 152.20177 | 23.85121 |
| 3 | ಮೀನುಗಾರಿಕೆ ದೋಣಿಗಳಿಗೆ ಸಂಪರ್ಕ ಸಾಧನ ಅಳವಡಿಕೆಗೆ ಸಹಾಯ | 0 | 12.48 | 0 |
| 4 | ಸುರಕ್ಷತೆ ಕಿಟ್‌ಗಳ ಖರೀದಿಗೆ ಸಹಾಯ | 0 | 10.45 | 0 |
| 5 | ಮೀನು ಮಾರಾಟ ಮಳಿಗೆಯ ರಚನೆ | | | |
| 6 | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು- ಐಸ್‌ಬಾಕ್ಸ್ ನೊಂದಿಗೆ ಮೋಟಾರ್ ಸೈಕಲ್ ಖರೀದಿಗೆ ಸಹಾಯ. | 1.59700 | 0 | 0 |
| 7 | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು- ತ್ರಿಚಕ್ರ ವಾಹನ ಖರೀದಿಗೆ ಸಹಾಯ. | 1.80 | 0 | 0 |
| 8 | ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ | 0 | 57.33 | 36.09 |
| 9 | ಶಾಲಾ/ಕಾಲೇಜುಗಳಿಗೆ ಅಕ್ವೇರಿಯಂ ಖರೀದಿಗೆ ಸಹಾಯ | 0 | 0 | 0 |
| 10 | ಶೈತ್ಯಾಗಾರ/ಮಂಜುಗಡ್ಡೆ ಸ್ಥಾವರಗಳ ನಿರ್ಮಾಣ (ಕನಿಷ್ಟ 50 ಟನ್) | 165.00 | 45.00 | 0 |
| 11 | ಶೈತ್ಯಾಗಾರ/ಮಂಜುಗಡ್ಡೆ ಸ್ಥಾವರಗಳ ಪುನರ್ ನಿರ್ಮಾಣ | 90.00 | 40.00 | 19.9885 |
| 12 | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು- ಶಾಖನಿರೋಧಕ ವಾಹನಗಳ ಖರೀದಿಗೆ ಸಹಾಯ | 32.00 | 20.00 | 8.00 |
| 13 | ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು- ಶೈತೀಕೃತ ವಾಹನಗಳ ಖರೀದಿಗೆ ಸಹಾಯ | 0 | 12.00 | 0 |
| 14 | ಬಯೋಫ್ಲಾಕ್ ಕೊಳಗಳ ನಿರ್ಮಾಣ | 0 | 14.40 | 0 |
| 15 | ಪಂಜರದಲ್ಲಿ ಮೀನು ಕೃಷಿ | 75.60 | 43.20 | 0 |

| | | | | |
|---|---|---|---|---|
| 16 | ಬೈವ್ಯಾಲ್ವ್ ಕಲ್ಚರ್ (Bivalves culture) | 9.80 | 1.64 | 0 |
| 17 | ಅಲಂಕಾರಿಕ ತಾಯಿ ಮೀನುಗಳ ಉತ್ಪಾದನೆ | 0 | 0 | 40.00 |
| **2** | **ರಾಜ್ಯ ವಲಯ ಯೋಜನೆ** | | | |
| 2 | ಮೀನುಗಾರಿಕಾ ಯಾಂತ್ರೀಕೃತ ದೋಣಿಗಳು ಬಳಸುವ ಡೀಸಲ್ ಮೇಲಿನ ಮಾರಾಟಕರ ಸಹಾಯಧನ | 69560 KL | 67681 KL | 74640 KL |
| 3 | ನಾಡದೋಣಿಗಳಿಗೆ ಸೀಮೆಎಣ್ಣೆ ವಿತರಣೆ | 1796.552 KL | 2378.200 | 2006.600 |
| 4 | ಮತ್ಸ್ಯ ಆಶಾಕಿರಣ-ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ನಿಧಿ | - | 40.20 | 18.045 |
| 5 | ಹಿನ್ನೀರು ಪ್ರದೇಶಗಳಲ್ಲಿ ಮೀನುಮರಿ ಬಿತ್ತನೆ | 15.00 | 15.00 | 10.00 |
| 4 | ಮತ್ಸ್ಯಾಶ್ರಯ ಯೋಜನೆಯಡಿ ವಸತಿ ನಿರ್ಮಾಣ<br>ಭಾಗ-1(2022-23)<br>ಭಾಗ-2(2023-24) | 243.43<br>342.95 | 266.40 | 0 |
| 5 | ಮೀನುಗಾರರ ಸಂಕಷ್ಟ ಪರಿಹಾರ ನಿಧಿ | 50.65630 | 35.45 | 38.45 |
| 6 | ಮೀನುಗಾರರಿಗೆ ಸಲಕರಣೆಕಿಟ್ ವಿತರಣೆ | 5.00 | 5.00 | 4.00 |
| 7 | ಮಂಜುಗಡ್ಡೆ ಘಟಕಗಳು ಮತ್ತು ಶೈತ್ಯಾಗಾರಗಳು ಬಳಸಿದ ವಿದ್ಯುತ್ ಮೇಲಿನ ಸಹಾಯಧನ | 79.664 | 191.32336 | 153.06 |
| **3.** | **ಜಿಲ್ಲಾ ವಲಯ ಯೋಜನೆ** | | | |
| 9 | ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಪ.ಜಾತಿ ಮೀನುಗಾರರಿಗೆ ಕಿಟ್ ವಿತರಣೆ | 1.00 | 1.00 | 1.00 |
| 10 | ಮೀನುಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ | 2.40 | 2.40 | 2.40 |

**ಮೀನುಗಾರಿಕೆ ನಿರ್ದೇಶಕರು**